ಪಿಡಬ್ಲ್ಯೂಃ 28, ಸಿಡಬ್ಲ್ಯೂಃ 69

**1ನೇ ಅಧಿಕ ಜಿಲ್ಲಾ ವ ಸತ್ರ ನ್ಯಾಯಾಧೀಶರು , ಧಾರವಾಡ ಮೊಕ್ಕಾಂ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಂಜೀವ ತಂದೆಃ ವೆಂಕಣ್ಣ ಮೋಹಿತೆ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಜೆಸಿಬಿ ಚಾಲಕ |
| ವಾಸಸ್ಥಳ | : | ರಾಮದುರ್ಗ |

( ದಿನಾಂಕ 16-07-2026 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು ಕಳೆದ 8 ವರ್ಷಗಳಿಂದ ಜೆಸಿಬಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆನೆ.

2. ದಿಃ 05-07-2022 ರಂದು ಮಧ್ಯಾಹ್ನ ಸುಮಾರು 3-15 ಗಂಟೆಗೆ ನಾನು ಐಎಫ ಯಾದವಾಡ ಕಾಲೇಜು ಹತ್ತಿರ ಜೆಸಿಬಿ ಯಿಂದ ಮುಳ್ಳಿನ ಗಿಡಗಳನ್ನು ತೆಗೆಯುತ್ತಿದ್ದೆನು. ಜೆಸಿಬಿ ನಂ.ಕೆಎ-25 ಎಮಬಿ9218 ಆಗಿತ್ತು. ಆಗ ಡಿಎಸಪಿ, ಪಿಐ ಹಗೂ ಸಿಬ್ಬಂದಿಯವರು ಬಂದರು. ಒಂದು ಕಾರು ಬರುತ್ತದೆ. ಆ ಕಾರಿಗೆ ಜೆಸಿಬಿ ಯಿಂದ ಅಡ್ಡಹಾಕು ಎಂದು ಪೋಲಿಸರು ಹೇಳಿದರು. ಮಧ್ಯಾಹ್ನ ಸುಮಾರು 3-45 ಸಮಯಕ್ಕೆ ಬಿಳಿ ಬಣ್ಣದ ಕಾರು ಸವದತ್ತಿ ಕಡೆಯಿಂದ ರಾಮದುರ್ಗಕ್ಕೆ ಬಂತು. ನಾನು ಜೆಸಿಬಿ ಯನ್ನು ರಸ್ತೆಗೆ ಅಡ್ಡ ನಿಲ್ಲಿಸಿದೆನು. ಬಿಳಿ ಕಾರನ್ನು ಪೋಲಿಸರು ತಡೆದರು. ನನಗೆ ಜೆಸಿಬಿ ಯನ್ನು ರಸ್ತೆಯಿಂದ ತೆಗಿ ಎಂದು ಹೇಳಿದರು. ಕಾರಿನಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಅವರನ್ನು ಪೋಲಿಸರು ಹಿಡಿದುಕೊಂಡರು. ಹುಬ್ಬಳ್ಳಿ ಪೋಲಿಸರು ಬಂದು ಕಾರಿನಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ತಮ್ಮ ಜೊತೆ ಕರೆದುಕೊಂಡು ಹೋದರು. ಕಾರಿನ ನಂಬರು ಹೇಳಲು ನೆನಪಿಲ್ಲ ಏಕೆಂದರೆ ಸುಮಾರು 4 ವರ್ಷ ಆಗಿದೆ. ಕಾರಿನಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ವಿಸಿ ಮೂಲಕ ಹಾಜರಾದ ವ್ಯಕ್ತಿಗಳನ್ನು ನೋಡಿ ಆ ದಿನ ಕಾರಿನಲ್ಲಿದ್ದ ವ್ಯಕ್ತಿಗಳು ಎಂದು ಗುರುತಿಸಿದ್ದಾರೆ. ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ. ಕಾರಿನ ಫೋಟೋ ನೋಡಿದರೆ ಗುರುತಿಸುತ್ತೇನೆ. ನಿಪಿ-63 ಫೋಟೋವನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ ಆರ್ ಪಿ ವಕೀಲರಿಂದಃ**

3. ಕಾಲೇಜಿನವರು ಹೇಳಿದ ಕಾರಣ ರಸ್ತೆ ಬದಿಯಲ್ಲಿದ್ದ ಮುಳ್ಳಿನ ಗಿಡಗಳನ್ನು ಜೆಸಿಬಿಯಿಂದ ಕೀಳುತ್ತಿದ್ದೆನು. ನಾನು ಆ ಸ್ಥಳದಲ್ಲಿ ಸುಮಾರು ಒಂದುವರೆ ಗಂಟೆ ಜೆಸಿಬಿಯೊಂದಿಗೆ ಇದ್ದೆನು. ಆರೋಪಿಗಳನ್ನು ಈದಿನ ಹೊರತುಪಡಿಸಿ ಈ ಹಿಂದೆ ಎಲ್ಲಿಯೂ ನೋಡಿಲ್ಲ ಎಂದರೆ ಆ ದಿನ ಕಾರಿನಲ್ಲಿ ಬಂದಾಗ ಪೋಲಿಸರು ಹಿಡಿದಾಗ ನೋಡಿರುತ್ತೇನೆ. ಜೆಸಿಬಿ ನಿಲ್ಲಿಸಿದ ಸ್ಥಳದಲ್ಲಿ ಹಲವಾರು ಜನರು ಗುಂಪು ಕಟ್ಟಿರಲಿಲ್ಲ. ಜೆಸಿಬಿಯನ್ನು ಪೋಲಿಸರು ರಸ್ತೆಯಿಂದ ತೆಗೆಯುವಂತೆ ಹೇಳಿದಾಗ ನಾನು ತೆಗೆದು ಅಲ್ಲಿಂದ ಮನೆಗೆ ಹೋದೆನು. ನಾನು ಜೆಸಿಬಿಯನ್ನು ಪೋಲಿಸರು ಹೇಳಿದ ಸ್ಥಳದಲ್ಲಿ ನಿಲ್ಲಿಸಿದ್ದಾಗ ಬೇರೆ ವಾಹನಗಳು ಆ ರಸ್ತೆಯಲ್ಲಿ ಓಡಾಡುತ್ತಿದ್ದವು ಏಕೆಂದರೆ ಪೋಲಿಸರು ಹೇಳಿದಾಗ ನಾನು ಜೆಸಿಬಿಯನ್ನು ರಸ್ತೆಗೆ ಅಡ್ಡವಾಗಿ ನಿಲ್ಲಿಸಿದೆನು. ಕಾರು ಯಾವ ಕಂಪನಿಯದ್ದು ಎಂದು ನಾನು ನೋಡಲಿಲ್ಲ.

4. ನಾನು ಜೆಸಿಬಿಯನ್ನು ರಸ್ತೆಗೆ ಅಡ್ಡವಾಗಿ ನಿಲ್ಲಿಸಿದ್ದಾಗ, ಕಾರು ಬಂದದ್ದನ್ನು ನೋಡಿ ಪೋಲಿಸರು ಕಾರನ್ನು ನಿಲ್ಲಿಸಿ, ನನಗೆ ಜೆಸಿಬಿಯನ್ನು ರಸ್ತೆಯಿಂದ ತೆಗಿ ಎಂದು ಹೇಳಿದಾಗ ನಾನು ಜೆಸಿಬಿಯನ್ನು ರಸ್ತೆಯಿಂದ ತೆಗೆದು ಮನೆಗೆ ಕಡೆಗೆ ಹೋದೆನು ಎಂದರೆ ಸರಿ. ಅಲ್ಲಿ ಯಾರು ಇದ್ದರು ಏನು ಎಂದು ನೋಡಲಿಲ್ಲ ಎಂದರೆ ಸರಿ. ಆರೋಪಿಗಳನ್ನು ಈದಿನ ನೋಡುವುದನ್ನು ಬಿಟ್ಟರೆ ಆ ದಿನ ನೋಡಿದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ, ನಾನು ಜೆಸಿಬಿ ವಾಹನದಲ್ಲಿ ಮೇಲೆ ಕುಳಿತಿದ್ದ ಕಾರಣ ಕಾರಿನಲ್ಲಿ ಬಂದವರನ್ನು ನೋಡಿದ್ದೇನೆ.

5. ಜೆಸಿಬಿಯನ್ನು ರಸ್ತೆಗೆ ಅಡ್ಡ ಹಾಕಿದ್ದಾಗ ಪೋಲಿಸರು ತಡೆದ ವಾಹನದಿಂದ ಆರೋಪಿಗಳು ಇಳಿದು ಬಂದ ಕಾರಣ ನಾನು ಅವರನ್ನು ನೋಡಿದ್ದೆನೆ. ಆರೋಪಿಗಳನ್ನು ಈ ಹಿಂದೆ ನೋಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ**

6. ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಜೆಸಿಬಿಯಿಂದ ಮುಳ್ಳಿನ ಗಿಡಗಳನ್ನು ಕೀಳುತ್ತಿದ್ದೆನು ಎಂದು ಹೇಳಿರುವುದಿಲ್ಲ ಎಂದರೆ ಈಗ ನನಗೆ ಆ ಬಗ್ಗೆ ನೆನಪಿಲ್ಲ. ಪೋಲಿಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ 2 ತಿಂಗಳು ಕಳೆದ ನಂತರ ನನ್ನ ಹೇಳಿಕೆ ಪಡೆದುಕೊಂಡರು. ರಸ್ತೆ ಅಡ್ಡ ಹಾಕಿದ್ದ ಜೆಸಿಬಿಯನ್ನು ಡಿಎಸಪಿ ಸಾಹೇಬರು ತೆಗೆಯುವಂತೆ ಹೇಳಿದರು ಎಂಬ

ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ **ಇದನ್ನು ಚಲಾಯಿಸಿಕೊಂಡು ಬರುತ್ತಿದ್ದಾಗ** ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆ ಭಾಗವನ್ನು **ನಿಡಿ-7** ಎಂದು ಗುರುತಿಸಲಾಯಿತು. ನಾನು ಯಾವುದೇ ಜೆಸಿಬಿಯನ್ನು ದಿಃ 05.07.2022 ರಂದು ಯಾದವಾಡ ಕಾಲೇಜು ಬಳಿ ಚಲಾಯಿಸಿಕೊಂಡು ಹೋಗಿರಲಿಲ್ಲ ಮತ್ತು ಮುಳ್ಳಿನ ಗಿಡಗಳನ್ನು ಜೆಸಿಬಿಯಿಂದ ಕೀಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀ ಸವಾಲನ್ನು ಅನುಮೋದಿಸುವುದಾಗಿ ನುಡಿದಿದ್ದಾರೆ.

ಮರುವಿಚಾರಣೆಃ ಇಲ್ಲ.

***( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಿದೆ }***

**ಸಾ ಓ ಹೇ ಕೇ ಸರಿ ಇದೆ**

(ಪಲ್ಲವಿ ಬಿ ಆರ್)
**1ನೇ ಅಧಿಕ ಸತ್ರ ನ್ಯಾಯಾಧೀಶರು, ಹುಬ್ಬಳ್ಳಿ**